THE NEW SUNDAY EXPRESS

SUNDAY 25.04.2021

ple moving around, there was no point in opening the doors.

Meanwhile, due to closure of hotels, some labourers had to struggle for food as they had come to city for their works. Social worker Vishu Shetty Ambalapady arranged food for about 100 people including destitutes and elderly people. He went around in areas like Adi Udupi, Pandubettu, Karavali Junction, Shiribeedu, Rajangana Car Parking area, Kinnimulki, bus stands and distributed packed food.

**Possible shortage of blood at Kasturba Hospital**

As per the new government order, people aged above 18 years are eligible for Covid vaccination from May 1, 2021. According to guidelines, they are restricted to donate blood for 28 days after vaccination. Therefore, it is not possible to donate blood for about 2-3 months from 2 doses of vaccination. As most of the blood donors are between the ages of 18 and 40, experts are expecting an acute shortage of blood. The shortage may result in postponing of emergency surgeries in the event of certain treatment of diseases and accidents cases. Dr Avinash Shetty, Medical Superintendent of Kasturba Hospital, on Saturday requested everyone to donate blood to Blood Bank, Kasturba Hospital, Manipal two days before taking vaccination. "If there are more than 10 donors, we will arrange vehicle for pick-up and drop," he said.

**Prohibitory order on heavy vehicles on NH-275**

MADIKERI: Kodagu DC

DECCAN HERALD
Sunday
April 25, 2021

# Free transport for willing to donate blood

MANIPAL, DHNS: With government permitting people above 18 years eligible for receiving Covid-19 vaccination from May 1, experts are anticipating a huge shortage of blood.

Most blood donors are between 18 and 40 years. As per the guidelines, they cannot donate blood for over 28 days after receiving the vaccination. After receiving two doses of vaccination, youth cannot donate blood for 2 to 3 months. Shortage of blood may result in postponing of surgeries. KMC Medical Superintendent Dr Avinash Shetty appealed everyone to donate blood at the Blood Centre, KMC, two days prior to taking vaccination. "If there are more than 10 donors, the hospital will arrange transport facilities for them," he added.

THE TIMES OF INDIA, MANGALURU
FRIDAY, APRIL 23, 2021

# Vaccination for all adults may cause blood shortage

Deepthi.Sanjiv@timesgroup.com

**Manipal:** While many states are facing a shortage of oxygen and ICU beds in the wake of rising Covid-19 cases, experts fear that there could be a shortage of blood in the coming days. The government's decision for all adults above 18 to get the jab in phase 3 of the vaccination drive from May 1, could lead to a shortage of blood donors.

## BALANCING ACT

Dr Avinash Shetty, medical superintendent, Kasturba Hospital, Manipal, told TOI, that they have been trying to spread awareness on the issue, and are requesting people to donate blood before taking the Covid-19 vaccine. "As per the guidelines issued by the National Blood Transfusion Council, one cannot donate blood for 28 days, after getting vaccinated. This may lead to an acute shortage of blood in the next two months," he said.

"Last year, during the pandemic and lockdown, there was a shortage of blood and fearing a crisis, employees of the hospital were motivated to donate blood. We have noticed that people are hesitant to come to the hospital to donate blood during the pandemic. But last year, during the lockdown, there was a reduction in the number of accidents, and treatment of non-Covid cases. The situation is not the same this year," he said.

"With colleges closed, mobilising students to donate blood continues to be a challenge. A majority of the blood donors are of the age group of 20-40, and are likely to get themselves jabbed in May. We are also holding discussions with experts on how to meet the challenges, and putting in place backup plans. We are considering postponing elective surgeries, and working out awareness drives to encourage youth to donate blood before getting vaccinated, by protecting oneself, and by also saving the lives of others," Dr Shetty said.

The blood requirement of the hospital is around 1,500 units per month.

Dr Shamee Shastry, professor and head, Kastruba Hospital Blood Centre, also urged the public to donate blood before vaccination.

**DAIJIWORLD**

**24th April 2021**

# Udupi: Kasturba Hospital Manipal requests donation of blood on account of acute blood shortage

**Udupi, Apr 24:** As per the new government order, people aged above 18 years are eligible for COVID vaccination from May 1 onwards. But, as per the guidelines, they are restricted from donating blood for 28 days after vaccination. Therefore, it is not possible to donate blood for about 2-3 months from two doses of vaccination. As most of the blood donors are between the ages of 18 and 40, experts are expecting an acute shortage of blood. The shortage of blood, may result in postponing emergency surgeries in the event of certain treatment of diseases and accident cases.

Dr Avinash Shetty, medical superintendent of Kasturba Hospital, hereby requests everyone to donate blood at the Blood Center of Kasturba Hospital, Manipal two days before taking the vaccination. If there are more than 10 donors, a vehicle will be arranged for pick-up and drop.

**JUSTDIAL**

**23rd April 2021**

# Vaccination for all adults may cause blood shortage

MANIPAL: While many states are facing a shortage of oxygen and ICU beds in the wake of rising Covid-19 cases, experts fear that there could be a shortage of blood in the coming days. The government's decision for all adults above 18 to get the jab in phase 3 of the vaccination drive from May 1, could lead to a shortage of blood donors.

Dr Avinash Shetty, medical superintendent, Kasturba Hospital, Manipal, told TOI, that they have been trying to spread awareness on the issue, and are requesting people to donate blood before taking the Covid-19 vaccine. "As per the guidelines issued by the National Blood Transfusion Council, one cannot donate blood for 28 days, after getting vaccinated. This may lead to an acute shortage of blood in the next two months," he said.

“Last year, during the pandemic and lockdown, there was a shortage of blood and fearing a crisis, employees of the hospital were motivated to donate blood. We have noticed that people are hesitant to come to the hospital to donate blood during the pandemic. But last year, during the lockdown, there was a reduction in the number of accidents, and treatment of non-Covid cases. The situation is not the same this year,” he said.

“With colleges closed, mobilising students to donate blood continues to be a challenge. A majority of the blood donors are of the age group of 20-40, and are likely to get themselves jabbed in May. We are also holding discussions with experts on how to meet the challenges, and putting in place backup plans. We are considering postponing elective surgeries, and working out awareness drives to encourage youth to donate blood before getting vaccinated, by protecting oneself, and by also saving the lives of others,” Dr Shetty said.

ವಿಜಯವಾಣಿ

ಭಾನುವಾರ 25 ಏಪ್ರಿಲ್ 2021 ● 25 APRIL 2021
● VIJAYAVANI » MANGALURU

# ರಕ್ತದಾನ ಮಾಡಲು ಸಾರ್ವಜನಿಕರಲ್ಲಿ ಮನವಿ

**ಉಡುಪಿ:** ಸರ್ಕಾರ ಮೇ 1ರಿಂದ 18 ವರ್ಷ ಮೇಲ್ಪಟ್ಟ ಎಲ್ಲರಿಗೂ ಕರೊನಾ ಲಸಿಕೆ ನೀಡಲು ನಿರ್ಧರಿಸಿದೆ. ಲಸಿಕೆ ಪಡೆದ 28 ದಿನ ರಕ್ತ ದಾನ ಮಾಡುವಂತಿಲ್ಲ. 2 ಡೋಸ್ ಇರುವ ಕಾರಣ, ಸುಮಾರು 2ರಿಂದ 3 ತಿಂಗಳ ಕಾಲ ರಕ್ತದಾನ ಸಾಧ್ಯವಾಗುವುದಿಲ್ಲ. ಈ ಸಮಯದಲ್ಲಿ ಆಸ್ಪತ್ರೆಗೆ ಅವಶ್ಯವಿರುವಷ್ಟು ರಕ್ತದ ಸಂಗ್ರಹ ಕೊರತೆ ಎದುರಾಗಲಿದೆ. ರಕ್ತದಾನಿಗಳಲ್ಲಿ ಹೆಚ್ಚಿನವರು 18ರಿಂದ 40 ವರ್ಷ ವಯಸ್ಸಿನವರೇ ಆಗಿರುವುದರಿಂದ ರಕ್ತದ ತೀರ ಅಭಾವ ಬರುವ ಸಾಧ್ಯತೆಗಳಿವೆ. ಲಸಿಕೆ ಪಡೆಯುವ ಒಂದೆರಡು ದಿನದ ಮೊದಲು ಕಸ್ತೂರ್ಬಾ ಆಸ್ಪತ್ರೆ ರಕ್ತ ಕೇಂದ್ರದಲ್ಲಿ ರಕ್ತದಾನ ಮಾಡಿ ಜೀವಗಳನ್ನು ಉಳಿಸಲು ಸಹಾಯ ಮಾಡಬಹುದು. 10ಕ್ಕಿಂತ ಹೆಚ್ಚು ದಾನಿಗಳಿದ್ದರೆ, ವಾಹನ ವ್ಯವಸ್ಥೆ ಮಾಡಲಾಗುವುದು ಎಂದು ಮಣಿಪಾಲ ಕೆಎಂಸಿ ಆಸ್ಪತ್ರೆ ವೈದ್ಯಕೀಯ ಅಧೀಕ್ಷಕ ಡಾ.ಅವಿನಾಶ ಶೆಟ್ಟಿ ತಿಳಿಸಿದ್ದಾರೆ.

ಪ್ರಜಾವಾಣಿ
ಭಾನುವಾರ • ಏಪ್ರಿಲ್ 25, 2021

# 'ಲಸಿಕೆಗೂ ಮುನ್ನ ರಕ್ತದಾನ ಮಾಡಿ'

ಉಡುಪಿ: ಮೇ 1ರಿಂದ 18 ವರ್ಷ ಮೇಲಿನವರಿಗೆ ಸರ್ಕಾರ ಕೋವಿಡ್ ಲಸಿಕೆ ನೀಡಲು ನಿರ್ಧರಿಸಿದೆ. ಸರ್ಕಾರದ ಮಾರ್ಗಸೂಚಿಯಂತೆ ಲಸಿಕೆ ಪಡೆದ 28 ದಿನ ರಕ್ತ ನೀಡುವಂತಿಲ್ಲ. ಪರಿಣಾಮ ಆಸ್ಪತ್ರೆಯಲ್ಲಿ ರಕ್ತದ ಕೊರತೆ ಎದುರಾಗಲಿದ್ದು, ಲಸಿಕೆ ಪಡೆಯುವ ಮುನ್ನವೇ ದಾನಿಗಳು ರಕ್ತದಾನ ಮಾಡಬೇಕು ಎಂದು ಕೆಎಂಸಿ ಆಸ್ಪತ್ರೆಯ ವೈದ್ಯಕೀಯ ಅಧಿಕ್ಷಕ ಡಾ.ಅವಿನಾಶ ಶೆಟ್ಟಿ ಮನವಿ ಮಾಡಿದ್ದಾರೆ.



ಸಾಂದರ್ಭಿಕ ಚಿತ್ರ

2 ಡೋಸ್ ಲಸಿಕೆ ಪಡೆದವರು 2 ರಿಂದ 3 ತಿಂಗಳು ರಕ್ತದಾನ ಮಾಡಲಾಗುವುದಿಲ್ಲ. ಇದರಿಂದ ಅಪಘಾತದಂತಹ ತುರ್ತು ಸಂದರ್ಭಗಳಲ್ಲಿ, ಶಸ್ತ್ರಚಿಕಿತ್ಸೆಗೆ ರಕ್ತದ ಕೊರತೆ ಉಂಟಾಗಲಿದೆ. ರಕ್ತದ ಅಭಾವದಿಂದ ಶಸ್ತ್ರಚಿಕಿತ್ಸೆಗಳನ್ನು ಮುಂದೂಡುವ ಸ್ಥಿತಿ ತಲೆದೋರಲಿದೆ ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

ರಕ್ತ ದಾನಿಗಳಲ್ಲಿ 18ರಿಂದ 40 ವರ್ಷದೊಳಗಿನವರು ಹೆಚ್ಚಿದ್ದು, ಈ ವಯೋಮಾನದವರಿಗೆ ಈಗ ಲಸಿಕೆ ಹಾಕಲಾಗುವುದರಿಂದ ರಕ್ತದ ಅಭಾವ ಎದುರಾಗಲಿದೆ. ಜೀವಗಳನ್ನು ಉಳಿಸಲು ಮಣಿಪಾಲದ ಕಸ್ತೂರ ಬಾ ಆಸ್ಪತ್ರೆಯ ರಕ್ತ ಕೇಂದ್ರದಲ್ಲಿ ರಕ್ತ ದಾನ ಮಾಡಬೇಕು ಎಂದು ವಿನಂತಿಸಿದ್ದಾರೆ. 10ಕ್ಕಿಂತ ಹೆಚ್ಚು ದಾನಿಗಳು ಇದ್ದರೆ, ಆಸ್ಪತ್ರೆಯಿಂದ ವಾಹನದ ವ್ಯವಸ್ಥೆ ಮಾಡಲಾಗುವುದು ಎಂದು ತಿಳಿಸಿದ್ದಾರೆ.

ವಿಜಯ ಕರ್ನಾಟಕ

ಸೋಮವಾರ, 26 ಏಪ್ರಿಲ್ 2021

# ಕೊರತೆಯಾಗದಂತೆ ರಕ್ತದಾನಕ್ಕೆ ಮನವಿ

**ವಿಕ ಸುದ್ದಿಲೋಕ** ಕುಂದಾಪುರ

ಮೇ ತಿಂಗಳಲ್ಲಿ 18 ವರ್ಷ ಮೇಲ್ಪಟ್ಟವರು ಕೊರೊನಾ ಲಸಿಕೆ ಪಡೆಯುವ ಮುನ್ನ ರಕ್ತದಾನ ಮಾಡುವುದು ಉತ್ತಮ ಎಂದು ಜೈ ಕುಂದಾಪ್ರ ಸೇವಾ ಟ್ರಸ್ಟ್ ರಕ್ತದಾನಿಗಳಲ್ಲಿ ಮನವಿ ಮಾಡಿದೆ.

ಕೊರೊನಾ ಲಸಿಕೆ ಪಡೆದ ಬಳಿಕ ಮುಂದಿನ 28 ದಿನಗಳ ಕಾಲ ರಕ್ತದಾನ ಮಾಡುವಂತಿಲ್ಲ, ಎರಡನೇ ಡೋಸ್ ಪಡೆದು ಮುಂದಿನ 56 ದಿನಗಳ ತನಕ ರಕ್ತದಾನ ಮಾಡಲು ಅಸಾಧ್ಯ. ಆ ನಿಟ್ಟಿನಲ್ಲಿ ಲಸಿಕೆ ಪಡೆಯುವ ಮುನ್ನ ರಕ್ತದಾನ ಮಾಡುವುದು ಉತ್ತಮ ಎಂದು ಜೈ ಕುಂದಾಪ್ರ ಸೇವಾ ಟ್ರಸ್ಟ್ ರಕ್ತದಾನಿಗಳಲ್ಲಿ ವಿನಂತಿಸಿದೆ.

ಜೈ ಕುಂದಾಪ್ರ ಸೇವಾ ಟ್ರಸ್ಟ್ ರಕ್ತದಾನ ಶಿಬಿರ ಹಾಗೂ ತುರ್ತು ಸಂದರ್ಭ ರಕ್ತದಾನದ ಜತೆಗೆ ಬಡ ರೋಗಿಗಳ ಚಿಕಿತ್ಸೆಗೆ ಸ್ಪಂದಿಸುವ ಮೂಲಕ ಜನಸೇವೆ ಮಾಡುತ್ತಿದೆ.

ವ್ಯಾಕ್ಸಿನೇಷನ್ ಪಡೆಯುವ ಮೊದಲು ರಕ್ತದಾನ ಮಾಡಲು ಇಚ್ಛಿಸುವವರು ಹತ್ತು ಅಥವಾ ಅದಕ್ಕಿಂತ ಹೆಚ್ಚು ಮಂದಿಯ ತಂಡ ರಚಿಸಿ, ಕೆಎಂಸಿ ಮಣಿಪಾಲ ರಕ್ತನಿಧಿಗೆ ಬಂದು ರಕ್ತದಾನ ಮಾಡಬಹುದು. ರಕ್ತದಾನ ಮಾಡುವವರನ್ನು ಉಚಿತವಾಗಿ ಕರೆದುಕೊಂಡು ಹೋಗಿ ಪುನಃ ನಿಮ್ಮನ್ನು ಅದೇ ಜಾಗಕ್ಕೆ ಕರೆದುಕೊಂಡು ಬರುವ ವ್ಯವಸ್ಥೆ ಮಾಡಲಾಗುತ್ತದೆ. ರಕ್ತನಿಧಿಗಳಲ್ಲಿ ರಕ್ತದ ನೋ ಸ್ಟಾಕ್ ಬೋರ್ಡ್ ಹಾಕುತ್ತಿದ್ದಾರೆ. ಈಗಾಗಲೇ ರಕ್ತದ ಕೊರತೆ ಉಂಟಾಗಿದ್ದು, ರಕ್ತಕ್ಕೆ ಪರ್ಯಾಯವಾದ ವಸ್ತು ಇಲ್ಲ, ನಿಮ್ಮ ಒಂದು ರಕ್ತದಾನದಿಂದ ಅದೆಷ್ಟೋ ಜನರ ಜೀವ ಉಳಿಸಬಹುದು. ಗಂಡು-ಹೆಣ್ಣೆಂಬ ಭೇದವಿಲ್ಲದೆ, 18ರಿಂದ 60 ವರ್ಷದೊಳಗಿರುವ ಎಲಾ ಆರೋಗ್ಯವಂತ ವ್ಯಕ್ತಿಗಳು ರಕ್ತದಾನ ಮಾಡಬಹುದು ಎಂದು ಜೈ ಕುಂದಾಪ್ರ ಸೇವಾ ಟ್ರಸ್ಟ್ ತಿಳಿಸಿದೆ.

ಹೆಚ್ಚಿನ ಮಾಹಿತಿಗಾಗಿ ಜೈ ಕುಂದಾಪ್ರ ಸೇವಾ ಟ್ರಸ್ಟ್ ನಿರ್ವಾಹಕ ಜಯರಾಜ್ ಸಾಲಿಯಾನ್ ಪಡುಕರೆ ಅವರನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

## ಲಸಿಕೆಗೆ ಮುನ್ನ ರಕ್ತದಾನ ಮಾಡಿ

**ಕುಂದಾಪುರ:** ಕೋವಿಡ್ ವ್ಯಾಕ್ಸಿನೇಶನ್ ಅಭಿಯಾನ ಹಿನ್ನೆಲೆಯಲ್ಲಿ ರಕ್ತದ ಕೊರತೆ ಎದುರಾಗುವ ಕಳವಳ ಜಿಲ್ಲೆಯಲ್ಲಿ ಮೂಡಿದೆ.

ಸರಕಾರಿ ಆದೇಶದ ಪ್ರಕಾರ ಮೇ 21, 2021ರಿಂದ 18 ವರ್ಷಕ್ಕಿಂತ ಮೇಲ್ಪಟ್ಟ ಜನರು ಕೋವಿಡ್ ವ್ಯಾಕ್ಸಿನೇಶನ್‌ಗೆ ಅರ್ಹರಾಗಿದ್ದಾರೆ.ಆದರೆ ಮಾರ್ಗಸೂಚಿಗಳ ಪ್ರಕಾರ ಲಸಿಕೆ ಹಾಕಿದ ನಂತರ 28 ದಿನಗಳವರೆಗೆ ರಕ್ತದಾನ ಮಾಡಲು ನಿರ್ಬಂಧವಿದೆ. 2 ಡೋಸ್ ವ್ಯಾಕ್ಸಿನೇಶನ್‌ನಿಂದ 2-3 ತಿಂಗಳು ರಕ್ತದಾನ ಮಾಡಲು ಸಾಧ್ಯವಿಲ್ಲ, ರಕ್ತದಾನ ಮಾಡುವವರಲ್ಲಿ ಹೆಚ್ಚಿನವರು 18ರಿಂದ 40 ವರ್ಷದೊಳಗಿನವರಾಗಿರುವುದರಿಂದ ರಕ್ತದ ಕೊರತೆಯ ಕಳವಳ ಮೂಡಿದೆ.

**ರಕ್ತದಾನಕ್ಕೆ ವ್ಯವಸ್ಥೆ:** ಕೋವಿಡ್ ವ್ಯಾಕ್ಸಿನೇಶನ್ ಅಭಿಯಾನ ಜಾರಿಗೊಂಡ ಬಳಿಕ ರಕ್ತದ ಕೊರತೆ, ರೋಗಗಳು ಹಾಗೂ ಅಪಘಾತ ಪ್ರಕರಣಗಳ ಕೆಲವು ಚಿಕಿತ್ಸೆಯ ಸಂದರ್ಭದಲ್ಲಿ ತುರ್ತು ಶಸ್ತ್ರಚಿಕಿತ್ಸೆ ಮುಂದೂಡಬೇಕಾಗಿ ಬರಬಹುದು. ಆದ್ದರಿಂದ ಲಸಿಕೆ ತೆಗೆದುಕೊಳ್ಳುವ ಎರಡು ದಿನದ ಮೊದಲು ರಕ್ತದಾನ ಮಾಡಿದರೆ ಒಳಿತು. 10ಕ್ಕೂ ಹೆಚ್ಚು ದಾನಿಗಳಿದ್ದರೆ ಅವರು ಬಂದು ಹೋಗಲು ವಾಹನ ಸೌಕರ್ಯ ಒದಗಿಸುತ್ತೇವೆ ಎಂದು ಹೇಳುತ್ತಾರೆ ಮಣಿಪಾಲ ಕಸ್ತೂರ್ಬಾ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ.ಅವಿನಾಶ್ ಶೆಟ್ಟಿ.

27-4-2021
UDAYAVANI - MANIPAL

# ರಕ್ತದಾನಿಗಳ ಜಿಲ್ಲೆಗೆ ತಲೆದೋರಲಿದೆಯೇ ರಕ್ತದ ಅಭಾವ?

ಉಡುಪಿ, ಎ. 26: ಸರಕಾರ ಮೇ 1ರಿಂದ ಎಲ್ಲರಿಗೂ ಕೊರೊನಾ ನಿರೋಧಕ ಲಸಿಕೆ ನೀಡಲು ಮುಂದಾಗಿದೆ. ಇದರ ಹಿಂದೆಯೇ ರಕ್ತದಾನಿಗಳ ಜಿಲ್ಲೆಯಲ್ಲಿ ರಕ್ತದ ಕೊರತೆಯಾಗುವ ಸಾಧ್ಯತೆಗಳಿವೆ. ಈ ನಿಟ್ಟಿನಲ್ಲಿ ಲಸಿಕೆ ಹಾಕಿಸಿಕೊಳ್ಳುವ ಮೊದಲು ರಕ್ತದಾನ ಮಾಡಿ ಎನ್ನುವ ಸಂದೇಶ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

ರಕ್ತನಿಧಿಗಳು ರಕ್ತ ಸಂಗ್ರಹಕ್ಕಾಗಿ 18ರಿಂದ 45 ವರ್ಷದೊಳಗಿನ ಸ್ವಯಂಪ್ರೇರಿತ ರಕ್ತದಾನಿಗಳನ್ನೇ ಅವಲಂಬಿಸಿವೆ. ಆದರೆ ಈ ಮೇ ಒಂದರಿಂದ ಈ ವರ್ಗವು ಕೋವಿಡ್ ಲಸಿಕೆ ಹಾಕಿಸಿಕೊಳ್ಳಲು ಆರಂಭಿಸಿದರೆ, ಮೊದಲ ಚುಚ್ಚುಮದ್ದಿನ ಅನಂತರ 4 ವಾರಗಳ ಕಾಲ ಅವರು ರಕ್ತದಾನಕ್ಕೆ ಅನರ್ಹ ರಾಗಿರುತ್ತಾರೆ. 2ನೇ ಚುಚ್ಚುಮದ್ದನ್ನು ನಾಲ್ಕರಿಂದ ಆರು ವಾರಗಳ ಅಂತರದಲ್ಲಿ ಹಾಕಿಸಿಕೊಂಡಾಗ ಅದರ ಮುಂದಿನ ನಾಲ್ಕು ವಾರಗಳ ಕಾಲವೂ ರಕ್ತದಾನ ಸಾಧ್ಯವಿಲ್ಲ, ಹಾಗಾಗಿ ರಕ್ತದ ಕೊರತೆಯಾಗಲಿದೆ ಎಂದು ಜಿಲ್ಲಾಸ್ಪತ್ರೆ ರಕ್ತನಿಧಿ ಕೇಂದ್ರದ ಮುಖ್ಯಸ್ಥೆ ಡಾ| ವೀಣಾ ಕುಮಾರಿ ಅವರು ತಿಳಿಸಿದರು.

### ಯಾಕೆ ರಕ್ತದಾನ ಮಾಡುವಂತಿಲ್ಲ?

ಟೆಟನಸ್ ಟಾಕ್ಸಾಯ್ಡ್ ಲಸಿಕೆ (ಟಿಟಿ) ತೆಗೆದುಕೊಂಡ ವ್ಯಕ್ತಿಯು ಸುಮಾರು 15 ದಿನಗಳ ಕಾಲ ರಕ್ತದಾನ ಮಾಡುವಂತಿಲ್ಲ, ಇದೀಗ ಹೊಸದಾಗಿ ಆವಿಷ್ಕರಿಸಲ್ಪಟ್ಟ ಲಸಿಕೆಯಾಗಿರುವುದರಿಂದ ಕೊರೊನಾ ಲಸಿಕೆ ಪಡೆದುಕೊಂಡ 28 ದಿನಗಳ ಕಾಲ ರಕ್ತದಾನ ಮಾಡುವಂತಿಲ್ಲ, ಲಸಿಕೆ ಪಡೆದವರ ರಕ್ತವನ್ನು ರೋಗಿಗೆ ನೀಡಿದಲ್ಲಿ ಹೆಪ್ಪುಗಟ್ಟುವಿಕೆ ಸೇರಿದಂತೆ ವಿವಿಧ ಸಮಸ್ಯೆಗಳು ಎದುರಾಗುವ ಸಾಧ್ಯತೆ ಇದೆ. ಈ ಹಿನ್ನೆಲೆಯಲ್ಲಿ ಲಸಿಕೆ ಪಡೆದ ವ್ಯಕ್ತಿಯ ರಕ್ತವನ್ನು ಪಡೆಯುವುದಿಲ್ಲ.

### ಲಸಿಕೆಗೆ ಮೊದಲು ರಕ್ತದಾನ ಮಾಡಿ

18ರಿಂದ 45 ವರ್ಷದೊಳಗಿನವರು ಲಸಿಕೆ ಪಡೆಯುವ ಮೊದಲು ರಕ್ತವನ್ನು ನೀಡಬೇಕು. ಇಲ್ಲವೇ ಮೊದಲ ಲಸಿಕೆ ಪಡೆದ 28 ದಿನಗಳ ಬಳಿಕ ರಕ್ತವನ್ನು ನೀಡಿ ಎರಡನೇ ಡೋಸ್ ಪಡೆದುಕೊಳ್ಳಬಹುದು. ಇದರಿಂದಾಗಿ ಜಿಲ್ಲೆಯಲ್ಲಿ ರಕ್ತದ ಕೊರತೆ ತಡೆಯ ಬಹುದು ಎಂದು ಮಣಿಪಾಲ ಕಸ್ತೂರ್ಬಾ ಆಸ್ಪತ್ರೆ ರಕ್ತ ಕೇಂದ್ರದ ಮುಖ್ಯಸ್ಥೆ ಡಾ| ಶಮಿ ಶಾಸ್ತ್ರಿ ತಿಳಿಸಿದ್ದಾರೆ.

> ಜಿಲ್ಲಾಸ್ಪತ್ರೆಯಲ್ಲೂ ಮುಂದಿನ ದಿನಗಳಲ್ಲಿ ರಕ್ತದ ಕೊರತೆ ಎದುರಾಗುವ ಸಾಧ್ಯತೆ ಇದೆ. ಈ ನಿಟ್ಟಿನಲ್ಲಿ ದಾನಿಗಳು ಲಸಿಕೆ ಪಡೆದುಕೊಳ್ಳುವ ಮೊದಲು ರಕ್ತದಾನ ಮಾಡುವ ಮೂಲಕ ಜಿಲ್ಲೆಯಲ್ಲಿನ ರಕ್ತದ ಕೊರತೆ ನೀಗಿಸಬೇಕು.
> 
> **- ಡಾ| ವೀಣಾ ಕುಮಾರಿ,**
> ರಕ್ತನಿಧಿ ಕೇಂದ್ರ ಮುಖ್ಯಸ್ಥೆ ಜಿಲ್ಲಾಸ್ಪತ್ರೆ ಉಡುಪಿ

> **ಮಣಿಪಾಲ ಆಸ್ಪತ್ರೆ: 10 ದಾನಿಗಳಿದ್ದರೆ ವಾಹನ ವ್ಯವಸ್ಥೆ**
> 
> ಕೊರೊನಾ ಲಸಿಕೆ ಪಡೆದ 28 ದಿನಗಳ ವರೆಗೆ ರಕ್ತ ಪಡೆಯಲು ಸಾಧ್ಯವಿಲ್ಲ, ಈ ಸಮಯದಲ್ಲಿ ಆಸ್ಪತ್ರೆಯಲ್ಲಿ ರಕ್ತದ ಕೊರತೆ ಎದುರಾಗಲಿದೆ. ಅವಶ್ಯವಿರುವಷ್ಟು ರಕ್ತದ ಸಂಗ್ರಹವಿರದಿದ್ದರೆ ಕೆಲವು ಕಾಯಿಲೆ, ಅಪಘಾತಗಳ ಸಂದರ್ಭದಲ್ಲಿ ತುರ್ತು ಶಸ್ತ್ರಚಿಕಿತ್ಸೆಗಳನ್ನು ಮುಂದೂಡುವ ಪ್ರಮೇಯ ತಲೆದೋರಲಿದೆ. ಲಸಿಕೆ ಪಡೆಯುವ ಒಂದೆರಡು ದಿನದ ಮೊದಲು ರಕ್ತದಾನ ಮಾಡಿ. 10ಕ್ಕಿಂತ ಹೆಚ್ಚು ದಾನಿಗಳು ಇದ್ದರೆ ಕಸ್ತೂರ್ಬಾ ಆಸ್ಪತ್ರೆ ಮಣಿಪಾಲದಿಂದ ವಾಹನ ವ್ಯವಸ್ಥೆ ಮಾಡಲಾಗುತ್ತದೆ.
> 
> **- ಡಾ| ಅವಿನಾಶ ಶೆಟ್ಟಿ,**
> ಕಸ್ತೂರ್ಬಾ ಆಸ್ಪತ್ರೆ ಮಣಿಪಾಲ